Sri D. B. KALMANKAR.—If I bring to the notice of the hon. Minister that those who have been nominated are not of these four villages and they are from a village circle which is already having elected members, will he try to take a person from those hamlets ?

Sri P. M. NADGOUDA.—Sir, that cannot be done by the Government at this late hour. That has been done by the Deputy Commissioner who has been invested with that power under the provisions of the Act.

Sri D. B. KALMANKAR.—Is it not a fact that the hon. Minister has given directions to nominate persons from another Village which has already got representation ?

Sri P. M. NADGOUDA.—No. Government has never issued such direction.

Sri H. SIDDAVEERAPPA.—How many elected Members are there ?

Sri P. M. NADGOUDA.—There are eleven.

ಶ್ರೀ ಎಂ. ನಾಗಪ್ಪ.—ಜಿಲ್ಲಾಧಿಕಾರಿಗಳು ಕಾಯಿದೆ ವಿರುದ್ಧ ಯಾವುದಾದರೂ ಕೆಲಸ ಮಾಡಿದ್ದರೆ ತಮ್ಮ ಅವಗಾಹನೆಗೆ ಆ ವಿಷಯವನ್ನು ತಂದರೆ ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ತಪ್ಪುಮಾಡಿದ್ದರೆ ಕ್ರಮ ತೆಗೆದುಕೊಳ್ಳಬಹುದು. ತಪ್ಪುಮಾಡಲಿಲ್ಲವೆಂದು ಹೇಳಿದರೆ ಯಾವ ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ.

ಶ್ರೀ ಎಂ. ನಾಗಪ್ಪ.—ಈ ಪಂಚಾಯತಿಯಲ್ಲಿ ಆ ಸದಸ್ಯರ ಹೆಸರು ಇಲ್ಲದಿದ್ದರೂ ಬೇರೆ ಪಂಚಾಯತಿಯಲ್ಲಿ ಆ ಹೆಸರನ್ನು ಸೇರಿಸಿದ್ದಾರೆ. ಇದು ಕಾಯಿದೆಗೆ ವಿರೋಧ. ಅದಕ್ಕಾಗಿ ಅದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಅವರದು ಗ್ರೂಪ್ ಪಂಚಾಯತಿ ಇದೆ. ಅದರಲ್ಲಿ ನಾಲ್ಕು ಗ್ರಾಮಗಳಿವೆ. ಇದರಲ್ಲಿ ಮೂರು ಗ್ರೂಪ್‌ನಿಂದ ಆರಿಸಿ ಬಂದರು. ಉಳಿದ ಗ್ರೂಪಿನಿಂದ ನಾಲ್ಕು ಮಂದಿ ಆರಿಸಿ ಬರಲಿಲ್ಲ. ಅವರು ಹೊರಟು ಹೋಗುತ್ತಾರೆ.

Hemavathi Reservoir Project

67. **Sri B. BHASKAR SHETTY** (Kaup).—

Will the Chief Minister be pleased to state :—

(*a*) when the tender for Hemavathi Reservoir Project for construction of spill-way Dam with non-overflow section and Wrap round on either side masonry training walls and protective works below the Dam from Ch. 4400 to 5740 ft. across Hemavathi River near Gorur, Hassan Taluk was called ;

(*b*) the terms and conditions of the tender ;

(*c*) the estimated cost of the work ;

(*d*) the number of contractors that filed their tenders in respect of the above work ;

(*e*) the name of the contractor whose tender was accepted ;

(*f*) whether the accepted tender was in conformity with the terms and conditions laid down ?

A.—**Sri VEERENDRA PATIL** (Chief Minister).—

(*a*) Tenders were invited by the Chief Engineer with his notification dated 21st September 1967.

(*b*) *Vide* Annexure I placed on the Table of the House.**

(*c*) Rs. 3,50,57,600.

(*d*) Fifteen Tenderers.

(*e*) M/s. Balaji Engineering and Construction Works, Bangalore.

(*f*) Yes.

ಶ್ರೀ ಬಿ. ಭಾಸ್ಕರಶೆಟ್ಟಿ.—ಹೇಮಾವತಿ ಜಲಾಶಯ ಯೋಜನೆಗೆ ಸಂಬಂಧಪಟ್ಟ ಹಾಗೆ ಬಾಲಾಜಿ ಇಂಜಿನಿಯರಿಂಗ್ ಅಂಡ್ ಕನ್‌ಸ್ಟ್ರಕ್ಷನ್ ಕಂಪೆನಿ ಏನಿದೆ ಅವರು ಟೆಂಡರಿನ ತತ್ವವನ್ನು ಪೂರೈಸಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಅವರು ಲೋಯೆಸ್ಟ್ ಟೆ-ಡರ್ ಹಾಕಿರುವ ಕಂಟ್ರಾಕ್ಟರ್ ಎಂದು ನೀವು ಹೇಳಿದರೂ ಅವರಿಗೆ ಬೇಕಾದಷ್ಟು ಅನುಭವ ಇಲ್ಲ. ಅವರು 50 ಸಾವಿರ ರೂಪಾಯಿಗಳ ಕೆಲಸ ಇಷ್ಟರವರೆಗೆ ಮಾಡಲಿಲ್ಲ. ಅವರಲ್ಲಿ ಕನ್‌ಸ್ಟ್ರಕ್ಷನ್ ಎಕ್ವಿಪ್‌ಮೆಂಟ್ಸ್ ಏನೂ ಇಲ್ಲ. ಇದು ಸರಿಯೇ?

†ಶ್ರೀ ವೀರೇಂದ್ರ ಪಾಟೀಲ್.—ಟೆಂಡರು ಫಾರಂ ಕೊಡುವುದು ಸರ್ಕಾರದವರು ಅಲ್ಲ. ಟೆಂಡರ್ ಫಾರಂ ಕೊಡುವುದು ಎಗ್ಸಿಕ್ಯುಟಿವ್ ಇಂಜನಿಯರಿಗೆ ಸಂಬಂಧಪಟ್ಟುದು. ಅವರು ಯೋಗ್ಯ ಕಂಟ್ರಾಕ್ಟರೇ ಎಂಬುದನ್ನು ನೋಡಿಕೊಂಡು ಟೆಂಡರ್ ಅವರಿಗೆ ಕಾಲ್ ಫಾರ್ ಮಾಡಿ ಕೊಡುತ್ತಾರೆ.

ಶ್ರೀ ಬಿ. ಭಾಸ್ಕರಶೆಟ್ಟಿ. ಅವರದು ಟೆಂಡರಿನ ತತ್ವಗಳಿಗೆ ಅನುಗುಣವಾಗಿಲ್ಲವೆಂದು ಚೀಫ್ ಇಂಜನಿಯರವರು ಅದನ್ನು ಮೂರು ತಿಂಗಳಿಂದ ಹೆಂಡಿಂಗ್‌ನಲ್ಲಿಟ್ಟಿದ್ದಾರೆಂಬುದು ಸರಿಯೇ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಪ್ರೊಸೀಜರ್ ತಿಳಿದುಕೊಳ್ಳಬೇಕು. ಯಾವುದೇ ವರ್ಕ್ ಟೆಂಡರ್ ಕಾಲ್‌ಫಾರ್ ಮಾಡಿದಮೇಲೆ ಚೀಫ್ ಇಂಜನಿಯರ್ ನಮ್ಮಲ್ಲಿಗೆ ಕಳುಹಿಸುತ್ತಾರೆ. ಎರ್ಲಾ ಮೇಜರ್ ಇರ್ರಿಗೇಷನ್ ಸಲುವಾಗಿ ಮೇಜರ್ ಇರ್ರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್ ಎಂದು ಇರುತ್ತದೆ. ಅದರಲ್ಲಿ ಒಂದು ಟೆಕ್ನಿಕಲ್ ಸಬ್ ಕಮಿಟಿ ಎಂದು ಮಾಡಿ ಆ ಕಮಿಟಿಯಲ್ಲಿ ಟೆಕ್ನಿಕಲ್ ಪೀಪರ್ ಮತ್ತು ರಿಜೈರ್ಡ್ ಚೀಫ್ ಇಂಜನಿಯರ್ಸ್ ಇರುತ್ತಾರೆ. ಅವರು ಯಾವ ರೀತಿ ಶಿಫಾರಸ್ಸು ಮಾಡುತ್ತಾರೋ ಅದು ಮೇಜರ್ ಇರ್ರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್ ಮುಂದೆ ಬರುತ್ತದೆ. ಸರ್ಕಾರದವರು ಆ ನಂತರ ಅವರ ಒಂದು ಶಿಫಾರಸಿನ ಬಗ್ಗೆ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತಾರೆ. ಆ ಪ್ರಕಾರ ಇಲ್ಲಿ ಬಾಲಾಜಿ ಕಂಪೆನಿಯವರದೇ ಲೋಯೆಸ್ಟ್ ಟೆಂಡರ್ ಇರುವುದರಿಂದ ಬೋರ್ಡಿನ ಶಿಫಾರಸ್ಸಿನ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಂಡಿದೆ.

ಶ್ರೀ ಹೆಚ್. ಎನ್. ನಂಜೇಗೌಡ.—ಆ ಕಂಪೆನಿಗೆ ಚೀಫ್ ಇಂಜನಿಯರ ಶಿಫಾರಸ್ಸಿಗೆ ವಿರೋಧವಾಗಿ ಕೊಟ್ಟಿದ್ದೀರಿ. ಚೀಫ್ ಇಂಜನಿಯರಿಗೆ ಟೆಕ್ನಿಕಲ್ ನಾಲೆಡ್ಜ್ ಇದ್ದುಕೊಂಡು ಸರಿಯಾಗಿ ಶಿಫಾರಸ್ಸು ಮಾಡಿರಲಿಲ್ಲವೇ? ಅವರು ಇನ್‌ಎಫಿಷಿಯಂಟ್ ಆಗಿದ್ದರೆ ಅವರ ಮೇಲೆ ಕ್ರಮ ತೆಗೆದು ಕೊಳ್ಳುತ್ತೀರಾ? You have given the work against the recommendation of the Chief Engineer. Does it mean that he is inefficient in this technical matter?

ಶ್ರೀ ವೀರೇಂದ್ರ ಪಾಟೀಲ್.—ಮೇಜರ್ ಇರ್ರಿಗೇಷನ್ ಪ್ರಾಜೆಕ್ಟಿಗೆ ಕೇವಲ ಚೀಫ್ ಇಂಜನಿಯರ್ ಶಿಫಾರಸ್ಸೇ ಸರಿಯೆಂದು ವಿಧಾಯಕವಾಗಿಲ್ಲ. ಚೀಫ್ ಇಂಜನಿಯರು ಟೆಕ್ನಿಕಲ್ ಸಬ್ ಕಮಿಟಿಗೆ ಅವರ ಶಿಫಾರಸ್ಸನ್ನು ಕಳುಹಿಸುತ್ತಾರೆ. ಮತ್ತು ಸರ್ಕಾರಕ್ಕೆ ಟೆಂಡರು ಕಳುಹಿಸುತ್ತಾರೆ. ಅದೂ ಸಹ ಟೆಕ್ನಿಕಲ್ ಸಬ್ ಕಮಿಟಿಯವರ ಹತ್ತಿರ ಬರುತ್ತದೆ. ಆ ಕಮಿಟಿಯ ಶಿಫಾರಸ್ಸು ಮೇಜರ್ ಇರ್ರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್ ಮುಂದೆ ಬರುತ್ತದೆ. ಅವರು ಅದನ್ನೆಲ್ಲಾ ನೋಡಿಕೊಂಡು ತೀರ್ಮಾನಮಾಡಿ ಸರ್ಕಾರಕ್ಕೆ ಕಳುಹಿಸುತ್ತಾರೆ, ನಂತರ ಸರ್ಕಾರದವರು ಅದರ ಬಗ್ಗೆ ಒಂದು ಆರ್ಡರ್ ಮಾಡುತ್ತಾರೆ.

** Copy placed in the Mysore Legislature Library, *vide* No. 4, dated 7th September 1968.

ಶ್ರೀ ಎಚ್. ಬಿ. ಜ್ವಾಲನಯ್ಯ.—ಚೀಫ್ ಇಂಜನಿಯರು ಏನು ಶಿಫಾರಸ್ಸು ಮಾಡಿದ್ದಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಆ ಮಾಹಿತಿ ನನ್ನಲ್ಲಿಲ್ಲ. ಯಾರ್ಯಾರು ಟೆಕ್ನಿಕಲ್ ಸಬ್ ಕಮಿಟಿಯಲ್ಲಿ ಯಾವ್ಯಾವ ರೀತಿಯಲ್ಲಿ ಹೇಳಿದ್ದಾರೆಯೋ ಅದನ್ನೆಲ್ಲಾ ಇಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಿ. ದುಗ್ಗಪ್ಪ.—ಬಾಲಾಜಿ ಇಂಜನಿಯರಿಂಗ್ ವರ್ಕ್ಸ್ ಅವರು ಟೆಕ್ನಿಕಲ್ ಸಬ್ ಕಮಿಟಿ ಮುಂದೆ, ಆಮೇಲೆ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್ ಮುಂದೆ, ಅದಕ್ಕಿಂತ ಮೊದಲು ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಓಡಾಡಿಯಾದಮೇಲೆ ತಾನೇ ಅವರಿಗೆ ಈ ಚೆಂಡರು ಕೊಟ್ಟಿದ್ದು?

ಶ್ರೀ ವೀರೇಂದ್ರ ಪಾಟೀಲ್.—ಯಾರೂ ಓಡಾಡುವ ಪ್ರಶ್ನೆ ಇಲ್ಲ. ಅದಕ್ಕಾಗಿ ಏನೂ ರೆಪ್ರಸೆಂಟ್ ಮಾಡಬೇಕಾಗಿಲ್ಲ. ಅಂದಮೇಲೆ ಯಾರೂ ಯಾರ ಮುಂದೆ ಓಡಾಡುವ ಪ್ರಶ್ನೆ ಇಲ್ಲ. ಏಕೆಂದರೆ ಕಮಿಟಿಗಳು ಇರುತ್ತವೆ, ಟೆಕ್ನಿಕಲ್ ಜನಗಳು ಇರುತ್ತಾರೆ, ರಿಜ್ಯೂಡ್ ಚೀಫ್ ಇಂಜನಿಯರುಗಳು ಇರುತ್ತಾರೆ. ಮೇಜರ್ ಇರ್ರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್ ಇರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಬೇರೆ ಇರುತ್ತಾರೆ. ಕೇಂದ್ರದ ಬೋರ್ಡಿನ ಪ್ರತಿನಿಧಿಗಳು ಇರುತ್ತಾರೆ. ಅವರೆಲ್ಲರೂ ನೋಡಿ ಲೋಯೆಸ್ಟ್ ಚೆಂಡರ್‌ದಾರರಿಗೆ ಕೊಟ್ಟಿದ್ದಾರೆ. ಇದರಲ್ಲಿ ಯಾರಿಗೆ ಯಾರೂ ಉಪಕಾರಮಾಡಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಈ ಯೋಜನೆಗೆ 15 ಜನ ಕಂಟ್ರಾಕ್ಟರುಗಳು ಬಂದಿದ್ದರೂ ಬಾಲಾಜಿ ಇಂಜಿನಿಯರಿಂಗ್ ಮತ್ತು ಕನ್‌ಸ್ಟ್ರಕ್ಷನ್ ಕಂಪೆನಿಯವರದು ಲೋಯೆಸ್ಟ್ ಚೆಂಡರ್ ಅಲ್ಲದಿದ್ದರೂ ಅವರನ್ನು ಚುನಾಯಿಸುವುದಕ್ಕೆ ಪ್ರಬಲವಾದ ಕಾರಣವೇನಿತ್ತು?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಸರಿಯಾಗಿ ನನ್ನ ಉತ್ತರವನ್ನು ಕೇಳಿಲ್ಲವೆಂದು ಕಾಣುತ್ತದೆ. ಅವರದೇ ಲೋಯೆಸ್ಟ್ ಇಂದು ಹೇಳಿದ್ದರಿಂದ ಅದಕ್ಕಾಗಿ ಅವರದನ್ನೇ ಒಪ್ಪಿಕೊಂಡಿದ್ದೇವೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ತಮ್ಮ ತತ್ಪಗಳಲ್ಲಿ ಹಿಂದಿನ ಅನುಭವ ಚೆಂಡರುದಾರನಿಗೆ ಇರಬೇಕೆಂದು ಇದೆ. ಆಂದ ಮೇಲೆ ಕಂಪೆನಿಯವರು ಯಾವುದಾದರೂ ಒಂದು ಕೋಟಿ ರೂಪಾಯಿಗಳ ಅಥವಾ 50 ಲಕ್ಷ ರೂಪಾಯಿಗಳ ಸ್ಪಿರ್‌ವೆ ಡ್ಯಾಂ ವರ್ಕ್ಸ್‌ನಲ್ಲಿ ಕೆಲಸ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಸ್ಪಿರ್‌ವೆ ಡ್ಯಾಂ ವರ್ಕ್ಸ್‌ನಲ್ಲಿಯೇ ಅವರು ಕೆಲಸ ಮಾಡಿರಬೇಕೆಂದು ಏನೂ ಇಲ್ಲ. ಇವರು 'ಎ' ಕ್ಲಾಸ್ ಕಂಟ್ರಾಕ್ಟರ್ ಆಗಿದ್ದಾರೆ. ನಮ್ಮ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿಗಳ ಬೆಲೆ ಬಾಳುವಂಥ ಕೆಲಸಗಳನ್ನು ಮಾಡಿದ್ದಾರೆ. ಅದಕ್ಕಾಗಿ ಎರಡು ಕಮಿಟಿಯವರೂ ಇವರ ಬಗ್ಗೆ ನಿರ್ಣಯಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ಕ್ರ್ಯಾಂಡಿಂಗ್ ಅಡ್ವೈಜರಿ ಕಮಿಟಿಯ ತೀರ್ಮಾನ ತೆಗೆದುಕೊಳ್ಳಲು ಯಾವುದಾದರೂ ನಿಯಮವನ್ನು ಇವರಿಗೆ ಗೊತ್ತುಮಾಡಿದ್ದೀರಾ? ಆ ನಿಯಮದಂತೆ ಅವರು ಕೆಲಸ ಮಾಡುತ್ತಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಮುಖ್ಯವಾಗಿ ಎರಡು ಕಮಿಟಿಗಳು ಇವೆ. ಒಂದು ಟೆಕ್ನಿಕಲ್ ಸಬ್ ಕಮಿಟಿ, ಇನ್ನೊಂದು ಮೇಜರ್ ಇರ್ರಿಗೇಷನ್ ಪ್ರಾಜೆಕ್ಟ್ ಕಂಟ್ರೋಲ್ ಬೋರ್ಡ್. ಇವೆರಡೂ ಟೆಕ್ನಿಕಲ್ ಕಮಿಟಿಗಳೇ ಆಗಿರುವುದರಿಂದ ಬಹಳಮಟ್ಟಿಗೆ ಎರ್ಲಾ ಜನರೂ ಟೆಕ್ನಿಕಲ್ ಜನರಾಗಿ ಇರುತ್ತಾರೆ. ಅವರು ಐಟಾವಾರು ಸ್ಕ್ರುಟಿನಿಮಾಡಿ ಕಂಟ್ರಾಕ್ಟ್‌ದಾರನ ಯೋಗ್ಯತೆ, ಅರ್ಗನೈಜೇಷನ್ ನೋಡಿಕೊಂಡು ಶಿಫಾರಸು ಮಾಡಿದ್ದಾರೆ. ಆ ಶಿಫಾರಸ್ಸನ್ನು ನೋಡಿ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರದವರು ಎರ್ಲಾ ಸಂದರ್ಭಗಳಲ್ಲಿಯೂ ಲೋಯೆಸ್ಟ್ ಚೆಂಡರ್ ಅಂಗೀಕಾರ ಮಾಡುತ್ತಾರೆ. ಚೆಂಡರನ್ನು ಒಪ್ಪುವಾಗ ಚೆಂಡರಿನಲ್ಲಿ ನಮೂದಾಗಿರುವ ಎರ್ಲಾ ಷರತ್ತುಗಳನ್ನೂ ಈಗ ಒಪ್ಪಿಕೊಂಡಿರತಕ್ಕ ಕಂಟ್ರಾಕ್ಟರ್ ಪೂರೈಸಿದ್ದೇನೇ?

ಶ್ರೀ ವೀರೇಂದ್ರ ಪಾಟೀಲ್.—ಯಾವಾಗಲೂ ಲೋಯೆಸ್ಟ್ ಚೆಂಡರುದಾರನಿಗೆ ಕೊಡುವುದು ಸರ್ವಸಾಮಾನ್ಯವಾದ ಪಾಲಿಸಿ. ಲೋಯೆಸ್ಟ್ ಚೆಂಡರ್‌ದಾರನ ಹತ್ತಿರ ಶಕ್ತಿಇಲ್ಲ, ಹಿಂದೆ ಯಾವುದೂ ಕೆಲಸಮಾಡಿಲ್ಲ, ಹಿಂದೆ ಕೆಲಸಮಾಡಿದ್ದು ಸರಿಯಾಗಿಲ್ಲ.—ಂತಹ ಕಾರಣಗಳೇನಾದರೂ ಇದ್ದರೆ,

ಅಂತಹವರಿಗೆ ಓವರ್‌ಲುಕ್ ಮಾಡುತ್ತೇವೆ. ಸಾಮಾನ್ಯವಾಗಿ ಯಾರಿಗೂ ಓವರ್‌ಲುಕ್ ಮಾಡುವುದಿಲ್ಲ. ಚೆಂಡರ್‌ಗಳು ಬಂದಿದ್ದರೆ ಅದನ್ನು ಯಾವ್ಯಾವ ಪರತ್ತುಗಳ ಪ್ರಕಾರ ಹಾಕಿದ್ದಾರೆಂಬುದನ್ನು ದೀರ್ಘವಾಗಿ ಚೆಕ್ನಿಕಲ್ ಸಬ್‌ಕಮಿಟಿಯವರು ಎಂ.ಐ.ಪಿ.ಸಿ. ಮಾಡಿದ್ದಾರೆ.

ಶ್ರೀ ಎನ್. ಹಚ್ಚೇಮಾಸ್ತಿಗೌಡ.—ಅಲ್ಲ ಚೆಕ್ನಿಕಲ್ ಮನುಷ್ಯರು ಇದ್ದರೂ ಕೂಡ ನಂದರ್ಭಾನು ಸಾರವಾಗಿ ತೀರ್ಮಾನಮಾಡುವುದಕ್ಕೆ ಅವಕಾಶವಿಲ್ಲದೇ ಇರುವಹಾಗೆ ಯಾವುದಾದರೂ ಒಂದು ನಿಯಮದಂತೆ ಕೆಲಸಮಾಡಬೇಕೆಂದು ಸರ್ಕಾರದವರು ಗೊತ್ತುಮಾಡಿದ್ದಾರೆಯೇ?

ಶ್ರೀ ವೀರೇಂದ್ರ ಪಾಟೀಲ್.—ಚೆಕ್ನಿಕಲ್ ಸಬ್ ಕಮಿಟಿ ಮುಂದೆ ಚೆಂಡರ್ ಬಂದಾಗ ಅದನ್ನು ಅಲ್ಲಿರತಕ್ಕ ಇಂಜನಿಯರ್ಸ್ ಒಂದು ಸಾರಿ, ಎರಡು ಸಾರಿ ನೋಡುತ್ತಾರೆ. ಚೆಂಡರ್ ಪ್ರಶ್ನೆಯೇ ಅಲ್ಲ. ಐಟಂಗಳನ್ನೂ ಸಹ ನೋಡುತ್ತಾರೆ. ನಮ್ಮ ಎಸ್ಟಿಮೇಟಿಗೆ ಅನುಗುಣವಾಗಿದೆಯೇ ಎಂಬುದನ್ನೂ ಸಹ ನೋಡುತ್ತಾರೆ. ಅವರ ಹತ್ತಿರ ಇರತಕ್ಕ ಆರ್ಗನೈಜೇಷನ್ ನೋಡುತ್ತಾರೆ. ಲೋಯೆಸ್ಟ್ ಚೆಂಡರ್ ಆಗಿದ್ದರೂ ಅವನ ಹತ್ತಿರ ಶಕ್ತಿ ಇದೆಯೇ, ಹಿಂದೆ ಎಷ್ಟೆಷ್ಟು ಕೆಲಸಮಾಡಿದ್ದಾನೆ ಎಂಬುದನ್ನೂ ಸಹ ನೋಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಈಗಿರತಕ್ಕ ಚೀಫ್ ಇಂಜನಿಯರಿಗೂ ಮತ್ತು ಈ ಕೆಲಸ ಕೊಟ್ಟಿರತಕ್ಕ ಕಂಟ್ರಾಕ್ಟ್‌ದಾರನಿಗೂ ಜಿಜ್ಞಾಸೆ ಬಂದು ಈ ಹೇಮಾವತಿ ಯೋಜನೆಯ ಕೆಲಸ ಬಹಳ ಮುಂದೂಡಲ್ಪಟ್ಟಿದೆ. ಇದರಿಂದ ಎಷ್ಟೋ ವೇಗವಾಗಿ ನಡೆಯಬೇಕಾದಂಥ ಕೆಲಸಕ್ಕೆ ಬಹಳವಾಗಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ವೀರೇಂದ್ರ ಪಾಟೀಲ್.—ಬಂದಿಲ್ಲ.

Exemption of Route tax to Vehicles plying in Gulbarga Division

68. **Sri L. SRIKANTAIAH** (Nanjangud).—

Will the Minister for Transport be pleased to state :—

(*a*) whether the Government have ordered the reduction or exemption of route tax to vehicles plying in Gulbarga District by Notifications issued between 8th July 1966 to 12th December 1967;

(*b*) if so, the number of routes that get the benefit under the above Notifications;

(*c*) the net financial loss sustained by the Government due to this reduction or exemption of route tax;

(*d*) on whose recommendations this reduction was given in those routes?

A.—**Sri MOHAMED ALI** (Minister for Transport).—

(*a*) Yes. Reduction in the rate of tax has been allowed.

(*b*) Three.

(*c*) Rs. 9,845 per year.

(*d*) On the recommendation of the Officers of the Motor Vehicles Department and in consultation with the Officers of Public Works Department.

ಶ್ರೀ ಎಂ. ನಾಗಪ್ಪ.—ಸ್ವಾಮಿ, 8-7-1966 ರಿಂದ 12-12-1967ರವರೆಗೆ ಗುಲ್ಬರ್ಗಾ ಜಿಲ್ಲೆಗೆ ವೆಹಿಕಲ್ಸ್ ತೆರಿಗೆ ವಸೂಲು ಮಾಡುವುದಕ್ಕೆ ವಿನಾಯ್ತಿ ಕೊಟ್ಟಿದ್ದೀರಿ, ಹೀಗೆಯೇ ಇತರ ಜಿಲ್ಲೆಗಳಿಗೂ ವಿನಾಯ್ತಿ ಕೊಟ್ಟಿದ್ದೀರಾ, ಗುಲ್ಬರ್ಗಾ ಜಿಲ್ಲೆಗೆ ವಿನಾಯ್ತಿ ಕೊಡುವುದಕ್ಕೆ ಅಧಿಕಾರಿಗಳಿಂದ ಏನು ವರದಿ ಬಂದಿದೆ?